‘ಭಾರತದುದ್ದಕ್ಕೂ ಜನ ಅವರನ್ನು ‘ಡಾಕ್ಟರ್ ಸಾಹೇಬ್’ ಎಂದು ಕರೆಯುತ್ತಿದ್ದರು; ನಾನೂ ಅವರನ್ನು ‘ಡಾಕ್ಟರ್ ಸಾಹೇಬ್’ ಎಂದೇ ಕರೆಯುತ್ತಿದ್ದೆ... ರಾಜಕಾರಣದ ಆಗುಹೋಗುಗಳಲ್ಲಿ ಅವರು ಸದಾ ನಿರತರಾಗಿದ್ದಾಗಲೂ, ರಾಜಕಾರಣದಲ್ಲಿ ಕಂಠಮಟ್ಟ ಮುಳುಗಿದ್ದಾಗಲೂ, ನನಗೆ ಹಲವಾರು ಪತ್ರಗಳನ್ನು ಬರೆದಿದ್ದಾರೆ’ ಎಂದು ರಮಾ ಮಿತ್ರ ಬರೆಯುತ್ತಾರೆ.

ಸುಮಾರು ಹದಿನೇಳು ವರ್ಷಕಾಲ ಲೋಹಿಯಾ ರಮಾಗೆ ಬರೆದ ಪತ್ರಗಳು ರಮಾ–ರಾಮಮನೋಹರರ ಸಂಬಂಧದ ಅಪರೂಪದ ಮುಖಗಳನ್ನು ದಾಖಲಿಸಿವೆ. ಜೊತೆಗೆ, ಹೊರ ಲೋಕ ಕಾಣದ ಲೋಹಿಯಾ ಮುಖಗಳೂ ಇಲ್ಲಿವೆ. ಇಂಗ್ಲಿಷ್, ಹಿಂದಿ ಭಾಷೆಗಳಲ್ಲಿರುವ ಈ ಪತ್ರಗಳು ‘ಲೋಹಿಯಾ ತ್ರೂ ಲೆಟರ್ಸ್’ ಸಂಕಲನದಲ್ಲಿ 1983ರಲ್ಲಿ ಪ್ರಕಟವಾದವು. 1976ರಲ್ಲಿ ರಮಾಮಿತ್ರರನ್ನು ಭೇಟಿಯಾದ ಕರ್ನಾಟಕದ ನ್ಯಾಯವಾದಿ ರವಿವರ್ಮಕುಮಾರ್ ಈ ಪುಸ್ತಕವನ್ನು 2023ರಲ್ಲಿ ಮತ್ತೆ ಪ್ರಕಟಿಸಿದರು. ಈ ಜೀವನಚರಿತ್ರಕಾರನ ಸಂಪಾದಕತ್ವದಲ್ಲಿ ಹಿಂದೆ ಇವು ಕನ್ನಡದಲ್ಲೂ ಪ್ರಕಟವಾಗಿದ್ದವು.

ರಾಷ್ಟ್ರೀಯ ಚಳುವಳಿಯ ಕಾಲದ ಕಲ್ಕತ್ತಾದಲ್ಲಿ ಬೆಳೆದ ರಮಾ ಮಿತ್ರ ಪ್ರಖರ ರಾಜಕೀಯ ಪ್ರಜ್ಞೆಯ ತರುಣಿಯಾಗಿದ್ದರು. ಓಂಪ್ರಕಾಶ್ ದೀಪಕ್ ಅವರ ‘ಡಾ. ಲೋಹಿಯಾ’ ಪುಸ್ತಕದ ವಿವರಗಳು:

ಇಂಗ್ಲಿಷ್ ಪರಿಸರದಲ್ಲಿ ವಿದ್ಯಾಭ್ಯಾಸ ಮಾಡಿದ್ದ ರಮಾ ಮಿತ್ರರಲ್ಲಿ ಜಾಗೃತವಾಗಿದ್ದ ರಾಷ್ಟ್ರೀಯ ಪ್ರಜ್ಞೆ ಅವರನ್ನು ಕ್ವಿಟ್ ಇಂಡಿಯಾ ಚಳುವಳಿಯ ಕಡೆಗೆ ಸೆಳೆಯಿತು. ಅಷ್ಟೊತ್ತಿಗಾಗಲೇ ರಮಾ ಕಲ್ಕತ್ತಾದ ಕಾಲೇಜೊಂದರಲ್ಲಿ ಹಿಸ್ಟರಿ ಅಧ್ಯಾಪಕಿಯಾಗಿದ್ದರು. ಕ್ವಿಟ್ ಇಂಡಿಯಾ ಚಳುವಳಿಯ ಕಾಲದಲ್ಲಿ ಭೂಗತ ಚಳುವಳಿಗಾರರು ಅವರ ಕೊಠಡಿಯನ್ನು ಸ್ಫೋಟಕ ಅಸ್ತ್ರಗಳನ್ನು ಬಚ್ಚಿಡಲು ಬಳಸಿಕೊಂಡಿದ್ದರು. ಈ ಸಾಹಸಕ್ಕೆ ಸಹಕರಿಸಿದ್ದ ರಮಾ ಮಿತ್ರ ಆಗ ಕಲ್ಕತ್ತಾದ ವಿದ್ಯಾರ್ಥಿನಿಯರ ಹಾಸ್ಟೆಲ್ಲಿನಲ್ಲಿದ್ದರು.

1946ರಲ್ಲಿ ಲೋಹಿಯಾ ಆಗ್ರಾ ಸೆರೆಮನೆಯಿಂದ ಬಿಡುಗಡೆಗೊಂಡು ಕಲ್ಕತ್ತಾಕ್ಕೆ ಬಂದರು. ಆಗ ರಮಾ ಮೊದಲ ಬಾರಿಗೆ ಲೋಹಿಯಾರನ್ನು ಭೇಟಿಯಾದರು; ಅಷ್ಟೊತ್ತಿಗಾಗಲೇ ಅವರು ಲೋಹಿಯಾರ ಭೂಗತ ಸಾಹಸಗಳ ಬಗ್ಗೆ ಕೇಳಿ, ಅಪಾರ ಗೌರವ, ಅಭಿಮಾನಗಳಿಂದಲೇ ಅವರನ್ನು ಭೇಟಿಯಾಗಿದ್ದರೆಂದು ಊಹಿಸಬಹುದು.

ರಮಾ ಮಿತ್ರ 1949ರಲ್ಲಿ ದೆಹಲಿಯ ಮಿರಾಂಡ ಕಾಲೇಜಿನಲ್ಲಿ ಅಧ್ಯಾಪಕಿಯಾದರು. ಪೂರ್ಣಾವಧಿ ರಾಜಕೀಯದಲ್ಲಿ ಗಂಭೀರವಾಗಿ ತೊಡಗಿದ್ದ ಲೋಹಿಯಾ ಬೌದ್ಧಿಕ ಒಳಲೋಕವೊಂದನ್ನು ರೂಪಿಸಿಕೊಂಡಿದ್ದರು; ಬುದ್ಧಿಜೀವಿ ರಮಾ, ಲೋಹಿಯಾರ ಆತ್ಮೀಯ ಸಂಗಾತಿಯಾದರು. ಸ್ತ್ರೀವಾದಿಯೆಂದು ಘೋಷಿಸಿಕೊಳ್ಳದೆ ಸ್ತ್ರೀವಾದವನ್ನೂ ಸಮಾಜವಾದದೊಳಗೆ ಬೆಸೆಯಲೆತ್ನಿಸಿದ್ದ ಲೋಹಿಯಾಗೆ ತೀಕ್ಷ್ಣ ಬುದ್ಧಿಜೀವಿಗಳಾದ ಗೆಳತಿಯರಿದ್ದರು. ಈ ಆಪ್ತ ವಲಯದಲ್ಲಿ ಸಮಾಜವಾದಿಗಳಾದ ಶಾಂತಿನಾಯಕ್, ಸ್ನೇಹಲತಾ ರೆಡ್ಡಿ, ಇಂದುಮತಿ ಕೇಳ್ಕರ್ ಮೊದಲಾದ ಆತ್ಮೀಯರಿದ್ದರು.

ಈ ಸಂಬಂಧಗಳಿಗಿಂತ ಭಿನ್ನವಾಗಿ, ರಮಾ–ರಾಮಮನೋಹರರ ಸಂಬಂಧ ಒಂದು ಜೀವಮಾನದ ಸಖ–ಸಖಿ ಸಂಬಂಧವಾಗಿತ್ತು. ಲೋಹಿಯಾ ಪತ್ರಗಳು ಅಲ್ಲಲ್ಲಿ ಸೂಚಿಸುವಂತೆ ಅದು ವಿವಾಹದ ಚೌಕಟ್ಟಿಗೆ ಒಳಪಡದ ಪ್ರೇಮ ಕಾಮಗಳ ಸಂಬಂಧವೂ ಆಗಿತ್ತು. ಲೋಹಿಯಾ ಹಾಗೂ ತಮ್ಮ ಪತ್ರಗಳನ್ನು ಒಟ್ಟಿಗೇ ಪ್ರಕಟಿಸಬೇಕೆಂಬುದು ರಮಾ ಉದ್ದೇಶವಾಗಿತ್ತು.

ಆದರೆ ಲೋಹಿಯಾಗೆ ರಮಾ ಮಿತ್ರ ಬರೆದ ಪತ್ರಗಳು ಹೈದರಾಬಾದಿನಲ್ಲಿ ಕಣ್ಮರೆಯಾದವು; ಹೀಗಾಗಿ ಲೋಹಿಯಾ ಪತ್ರಗಳಿಗೆ ಉತ್ತರವಾಗಿ ರಮಾ ಬರೆದ ಪತ್ರಗಳ ವಿವರ, ಧ್ವನಿ, ಟೀಕೆ, ವಾದಗಳನ್ನು ಲೋಹಿಯಾ ಪತ್ರಗಳಿಂದಲೇ ಊಹಿಸಿಕೊಳ್ಳಬೇಕಾಗಿದೆ; ಬೇಂದ್ರೆಯವರ ಪ್ರಖ್ಯಾತ ಸಾಲನ್ನು ಕೊಂಚ ಪಲ್ಲಟಗೊಳಿಸಿ ಹೇಳುವುದಾದರೆ, ಈ ಪತ್ರಗಳ ಮೂಲಕವೇ ರಮಾ–ರಾಮಮನೋಹರರ ಸಖ್ಯದ ಕಟುಮಧುರ ಆಖ್ಯಾನ ಮಾಡಬೇಕಾಗಿದೆ.

‘ಮನೆಯಲ್ಲಿ ನನ್ನನ್ನು ‘ಇಳಾ’, ‘ಎಳಾ’ ಎನ್ನುತ್ತಾರೆ; ಡಾಕ್ಟರ್ ಸಾಹೇಬರೂ ನನ್ನನ್ನು ಕರೆದಾಗ, ನನಗೆ ಪತ್ರ ಬರೆದಾಗ ಇದೇ ಹೆಸರು ಬಳಸುತ್ತಿದ್ದರು. ಉಳಿದ ಹೆಸರುಗಳು ಇಳಾ ಅಥವಾ ರಮಾದ ವಿವಿಧ ರೂಪಗಳು’ ಎಂದು ರಮಾ ಬರೆಯುತ್ತಾರೆ. ಬಂಗಾಳಿ ಮಾತೃಭಾಷೆಯ ರಮಾ ಮಿತ್ರರ ಇಂಗ್ಲಿಷ್ ಸ್ಪೆಲ್ಲಿಂಗ್ **Roma Mitra** ಆಗಿತ್ತು.

ಲೋಹಿಯಾ ತಮ್ಮ ಆಯಾ ಗಳಿಗೆಗಳ ಮೂಡುಗಳಿಗೆ ತಕ್ಕಂತೆ ರಮಾ ಮಿತ್ರರನ್ನು ರೊಮಾ, ರಮಾ, ರಮಲಿ, ಇಳಾ, ಇಲ್ಲೀ, ಇಲ್ಲೂ ರಾಣಿ, ಪುಟ್ಟ ಬೆಕ್ಕೇ ಎಂದೆಲ್ಲ ಕರೆಯುತ್ತಿದ್ದರು. ‘ರೊಮಾ! ಒಮ್ಮೊಮ್ಮೆ ಚೆನ್ನಾಗಿ ಕೇಳಿಸುತ್ತದೆ. ರೋಮ್‌ಗೂ ಇದಕ್ಕೂ ಸಂಬಂಧವಿದೆಯೆ?’ ಎಂದು ರೇಗಿಸಿದ್ದರು. ‘ಡಿಯರ್ ಪ್ರೊಫೆಸರ್’, ‘ಸನ್ಮಾನ್ಯ ಪ್ರೊಫೆಸರ್’ ಎಂದು ಕೆಣಕಿದ್ದರು. ಲೋಹಿಯಾರ ಬಹುತೇಕ ಪತ್ರಗಳು ‘ಡಿಯರ್ ಇಳಾ’ ಎಂದು ಶುರುವಾಗುತ್ತಿದ್ದವು.

ರವಿವರ್ಮ ಕುಮಾರ್ ನೆನಪಿನಲ್ಲಿರುವ ಚಿತ್ರದ ಪ್ರಕಾರ, ‘ರಮಾ ಮಿತ್ರ ಶ್ವೇತವರ್ಣದ ಮಹಿಳೆಯಾಗಿದ್ದರು. ತೆಳ್ಳಗಿನ, ಮಧ್ಯಮ ಎತ್ತರದ ರಮಾ ಮಿತ್ರರಿಗೆ ದ್ರವಿಡಿಯನ್ ಮುಖ ಚಹರೆಯಿತ್ತು. ಸಾಮಾನ್ಯವಾಗಿ ಸ್ಲೀವ್‌ಲೆಸ್ ರವಿಕೆ ಹಾಗೂ ಸೀರೆ ಅವರ ಉಡುಪು. ಎಂಬತ್ತರ ದಶಕದಲ್ಲಿ ರಮಾ ಮಿತ್ರರನ್ನು ರವಿವರ್ಮ ಕುಮಾರ್ ಬೆಂಗಳೂರಿನಲ್ಲಿ ಭೇಟಿಯಾದಾಗ, ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿರುವ ಕೋಶೀಸ್ ರೆಸ್ಟೋರೆಂಟ್ ಅವರ ಪ್ರಿಯವಾದ ತಾಣವಾಗಿತ್ತು. ಫೋರ್ ಸ್ಕ್ವೇರ್ ಸಿಗರೇಟ್ ಅವರ ಮೆಚ್ಚಿನ ಸಿಗರೇಟಾಗಿತ್ತು. ಕರ್ನಾಟಕದ ಸಮಾಜವಾದಿ ಸಭೆಗಳಿಗೂ ಬಂದಿದ್ದ ರಮಾ ಒಮ್ಮೆ ಮೈಸೂರಿನ ಲೇಖಕಿ ಪದ್ಮಾ ಶ್ರೀರಾಮ್ ಮನೆಯಲ್ಲೂ ಉಳಿದಿದ್ದರು.

ರಮಾ ಮಿತ್ರ ಕೆಲಸ ಮಾಡುತ್ತಿದ್ದ ದೆಹಲಿಯ ಪ್ರತಿಷ್ಠಿತ ‘ಮಿರಾಂಡ ಹೌಸ್ ಮಹಿಳಾ ಕಾಲೇಜು’ ಆ ಕಾಲದ ಹೊಸ ಫ್ಯಾಷನ್‌ಗಳ, ಆಧುನಿಕ ಚಿಂತನೆಯ ಅಲೆಗಳ ತವರಾಗಿತ್ತು. ಅಲ್ಲಿ ಹಿಸ್ಟರಿ ಪಾಠ ಮಾಡುತ್ತಿದ್ದ ರಮಾ ಗಂಭೀರ ಅಕಡೆಮಿಕ್ ಆಗಿದ್ದರು; ಸ್ವತಂತ್ರ ನಿಲುವಿನ ಮಹಿಳೆಯಾಗಿದ್ದರು. ರಮಾ ಮಿತ್ರ–ಲೋಹಿಯಾ ನಡುವೆ ಅಂಟಿದ ನಂಟು ಇಬ್ಬರ ಜೀವಿತದ ಕೊನೆಯವರೆಗೂ ಗಾಢವಾಗಿತ್ತು.

ರಮಾ ಮಿತ್ರ ಟೀಚಿಂಗ್, ಸಂಶೋಧನೆಗಳ ಜೊತೆಗೇ ಸಮಕಾಲೀನ ರಾಜಕಾರಣಕ್ಕೂ ಸ್ಪಂದಿಸುತ್ತಿದ್ದರು. ಲೋಹಿಯಾರ ಓದು, ಬರಹ, ಚರ್ಚೆ, ರಾಜಕಾರಣದಲ್ಲಿ ನೆರವಾಗುತ್ತಿದ್ದರು; ಲೋಹಿಯಾರಿಂದ ಕಲಿಯುತ್ತಿದ್ದರು, ಛೇಡಿಸಿಕೊಳ್ಳುತ್ತಿದ್ದರು. ಅವರ ನಿಲುವುಗಳನ್ನು ವಿಮರ್ಶಿಸುತ್ತಿದ್ದರು. ‘ಮ್ಯಾನ್‌ಕೈಂಡ್’ ಮಾಸಪತ್ರಿಕೆ ಶುರುವಾದಾಗ ರಮಾ ಅದರ ಸಂಪಾದಕರಲ್ಲೊಬ್ಬರಾಗಿದ್ದರು. ಲೋಹಿಯಾ ತಮ್ಮ ಅನೇಕ ಸಾಂಸ್ಕೃತಿಕ ಬರಹಗಳ ವಿವರಗಳನ್ನು ಮೊದಲು ರಮಾ ಜೊತೆ ಹಂಚಿಕೊಂಡಂತಿದೆ; ಬರೆದ ಮೊದಲ ಪ್ರತಿಯನ್ನು ರಮಾಗೆ ಉಡುಗೊರೆಯಾಗಿ ಕೊಟ್ಟಿದ್ದಿದೆ.

ರಮಾಗೆ ಲೋಹಿಯಾ ಬರೆದ ಪತ್ರಗಳು

